ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು
ಮಡಿಕೇರಿ

ಎಫ್‌ಡಿಪಿ ನಂ:೬:೧೩

ಪಿಡಬ್ಲ್ಯು- ೨

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಂಜಮ್ಮ ಪಿ. ಎಂ. |
| ಗಂಡನ ಹೆಸರು | : | ರಮೇಶ್ |
| ವಯಸ್ಸು | : | ೫೮ ವರ್ಷ |
| ವೃತ್ತಿ | : | ತಹಶೀಲ್ದಾರ್ ಮಡಿಕೇರಿ |
| ವಾಸಸ್ಥಳ | : | ಮಡಿಕೇರಿ |

ದಿ: ೩೦-೦೪-೨೦೧೬ ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ.ಸಿಎಂಕೆ ವಕೀಲರಿಂದ:-

ಈ ಪ್ರಕರಣದಲ್ಲಿರುವ ಅರ್ಜಿದಾರರ ತಂದೆಯಾದ ಹಂಸಾರವರಿಗೆ ೧೯೯೩-೯೪ ನೇ ಸಾಲಿನಲ್ಲಿ ಕೊಟ್ಟಂತಹ ಸಾಗುವಳಿ ಚೀಟಿಗೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸಾಕ್ಷ್ಯ ನುಡಿಯಲು ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತರಲು ಆದೇಶವಾಗಿ ಸಮನ್ಸ್ ಬಂದ ಕಾರಣ ಬಂದಿರುತ್ತೇನೆ. ಸದರಿ ದಾಖಲೆ ಅಥವಾ ಕಡತವನ್ನು (೧ ರಿಂದ ೫೬ ಪುಟಗಳು) ಒಟ್ಟಾಗಿ ನಿಪಿ-೪ ಎಂದು ಗುರುತಿಸಲಾಯಿತು. ಸಾಗುವಳಿ ಚೀಟಿ ಕೊಡುವಾಗ ಅರ್ಜಿದಾರರಿಗೆ ಮೂಲ ಪ್ರತಿ ಕೊಡುತ್ತೇವೆ ಅದರ ಇನ್ನೊಂದು ಪ್ರತಿ ಕಡತದಲ್ಲಿ ಇರುತ್ತದೆ. ಸದರಿ ಕಡತದಲ್ಲಿ ಇರುವ ಮೂಲ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯದಲ್ಲಿಯೇ ಅದರ ದೃಡೀಕೃತ ನಕಲುಗಳನ್ನು ಮಾಡಿಸಿ, ಸದರಿ ದೃಡೀಕೃತ ನಕಲನ್ನೇ ನಿಪಿ-೪ ಎಂದು ಮೇಲೆ ಹೇಳಿದಂತೆ ಗುರುತಿಸಲಾಗಿರುತ್ತದೆ.

ಪಾಟೀ ಸವಾಲು : ಶ್ರೀ. ಸಿಎಂಕೆ ವಕೀಲರಿಂದ:-

ಸಾಗುವಳಿ ಚೀಟಿಯಲ್ಲಿರುವ ಮೂಲ ಸರ್ವೆ ನಂಬರನ್ನು ಜಮಾಬಂಧಿ ನೋಡಿಯೋ ಹೇಳಬೇಕಾಗುತ್ತದೆ. ಸಾಗುವಳಿ ಚೀಟಿಯಲ್ಲಿ ಇರುವ ೬೫/೬ ಮತ್ತು ೯೯/೨೫ ಏನಾಗಿರುತ್ತದೆ ಎಂದರೆ ಸಾಕ್ಷಿ ತಾಂತ್ರಿಕ ಅಬಿಪ್ರಾಯವನ್ನು ಎಡಿಎಲ್‌ಆರ್ ಅವರಿಂದ ಪಡೆಯಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಅಕ್ರಮ ಸಕ್ರಮ ಅಡಿಯಲ್ಲಿ ಅರ್ಜಿ ಹಾಕಿದಾಗ ನಂತರ ಟೇಬಲ್ ಸರ್ವೆ ಮೂಲಕ ಅಳತೆ ಆಗಿ ನಂತರ ಸಾಗುವಳಿ ಚೀಟಿಯನ್ನು ಕೊಟ್ಟು ಪ್ಲ್ಯಾನ್‌ನ್ನು ತಯಾರಿಸಲು ಎಡಿಎಲ್‌ಆರ್‌ರವರು ನಂತರ ಕ್ರಮ ಕೈಗೊಳ್ಳುತ್ತಾರೆ. ನಂತರ ದುರಸ್ತಿಯಾಗಿ ನಮ್ಮ ಕಚೇರಿಗೆ ಅದು ವಾಪಾಸ್ಸಾಗುತ್ತದೆ ಎಂದರೆ ಸರಿ. ಸಾಗುವಳಿ ಚೀಟಿಯಲ್ಲಿ ಎಡಿಎಲ್‌ಆರ್ ರಅವರು ಹಾಕಿದ ಷರಾದ ಮೇರೆಗೆ ಸದರಿ ಭೂಮಿಯ ಪ್ಲಾನನ್ನು ಮತ್ತು ದುರಸ್ತಿ ಪೋಡಿಯನ್ನು ಮಾಡಿ ತಮ್ಮ ಕಚೇರಿಯಲ್ಲಿ ಪ್ರತ್ಯೇಕವಾಗಿ ಇಟ್ಟಿರುವ ಬಗ್ಗೆ ನಮೂದಾಗಿರುತ್ತದೆ. ಸಾಗುವಳಿ ಚೀಟಿಯಲ್ಲಿ ನಮಾದಾದ ಕಡತ ಸಂಖ್ಯೆ ಎಡಿಎಲ್‌ಆರ್/ಡಿಪಿಆರ್/೧೦೭/೯೩-೯೪ ಕಡತ ಈಗ ನನ್ನ ಪ್ರಕಾರ ಡಿಡಿಎಲ್‌ಆರ್ ಎಡಿಎಲ್‌ಆರ್ ಕಚೇರಿಯಲ್ಲಿ ಇರುತ್ತದೆ. ಆಕಾರಬಂದ್‌ನ್ನು ನೋಡಿದ ಪಕ್ಷದಲ್ಲಿ ಸದರಿ ಭೂಮಿಯ ಇರುವಿಕೆಯ ಬಗ್ಗೆ ಸರಿಯಾದ ಮಾಹಿತಿ ದೊರೆಯುತ್ತದೆ. ಸದರಿ ಆಕಾರ್ ಬಂದ್ ಡಿಡಿಎಲ್‌ಆರ್‌ರವರ ಕಚೇರಿಯಲ್ಲಿ ಇರುತ್ತದೆ. ಸಾಗುವಳಿ ಚೀಟಿಗೆ ಸಂಬಂಧಿಸಿದ ಆರ್‌ಟಿಸಿಯನ್ನು ಮತ್ತು ಮ್ಯೂಟೇಷನ್ ರಿಜಿಸ್ಟರ್‌ನ ಪ್ರತಿಯ ದೃಡೀಕೃತ ನಕಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-೫ ಮತ್ತು ೬ ಎಂದು ಗುರುತಿಸಲಾಯಿತು. ನಿಪಿ-೪ ರಲ್ಲಿ ಮೂಲ ಪಿಟಿ ಶೀಟ್ ಮತ್ತು ವರ್ಕಿಂಗ್ ಶೀಟ್ ಕೂಡ ಇರುತ್ತದೆ. ಪಿಟಿ ಶೀಟ್‌ನ ಆಧಾರದ ಮೇಲೆಯೇ ನಾವು ಕಚೇರಿಯಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುತ್ತೇವೆ ಎಂದರೆ ಸರಿ.

**(ತಹಶೀಲ್ದಾರ್ ಎಡಿಎಲ್‌ಆರ್‌ರವರ ಕಚೇರಿಯಲ್ಲಿರುವ ಕಡತವನ್ನು ನೋಡಿ ಇದಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ಮಾಡಿದಲ್ಲಿ ಸಾಕ್ಷ್ಯ ನುಡಿಯಲು ಸಾದ್ಯವಾಗುತ್ತದೆ ಎಂದು ಹೇಳಿದ ಕಾರಣ ಸಮಯವನ್ನು ನೀಡಲಾಯಿತು.)**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ:-

ಜೆಎಂಎಫ್‌ಸಿ,ಮಡಿಕೇರಿ